© 2019 IJRAR January 2019, Volume 6, Issue 1 www.ijrar.org (E-ISSN 2348-1269, P- ISSN 2349-5138)

ಹೈದ್ರಾಬಾದ್ ಕರ್ನಾಟಕಕ್ಕೆ ಜನಪದ ಸಾಹಿತ್ಯದ ಕೊಡುಗೆ

ಡಾ. ವೆಂಕಟೇಶ ಹೆಚ್.
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ರಾಣೇಬೆನ್ನೂರು, ಜಿಲ್ಲೆ ಹಾವೇರಿ, ರಾಜ್ಯ ಕರ್ನಾಟಕ, ಭಾರತ.
ಮೋ ನಂ : 9164444571
ಇಮೇಲ್ : venkateshhongai@gmail.com

ಪಂಡಿತರುಂ ವಿವಿಧ ಕಳಾ !
ಪಂಡಿತರುಂ ಕೇಳತಕ್ಕೆ ಕೃತಿಯಂ ಕ್ಷಿತಯೊಳ್ !
ಕಂಡರ್ ಕೇಳ್ವೊಡೆ ಗೊರವರ !
ಡುಂಡುಚಿಯ ಬೀದಿವರೆದು ಬೀರನ ಕತೆಯೇ !

ಮಧುರ ಕವಿಯು ತನ್ನ ಮಾತಿನಲ್ಲಿ ಸಾಮಾನ್ಯ ಸಾಹಿತ್ಯವನ್ನು ಕುರಿತು ತಮ್ಮ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಹಳ್ಳಿಗರ ಅನುಭವದಿಂದ ಒಡಮೂಡಿದ ಸಾಹಿತ್ಯ ತಮ್ಮ ಬದುಕಿನ ಸುಖಃ ದುಃಖಗಳನ್ನು, ನೋವು–ನಲಿವುಗಳನ್ನು, ಕಷ್ಟಕಾರ್ಪಣ್ಯಗಳನ್ನು, ಸುಳಿವು–ಒಳವುಗಳನ್ನು ಮುಚ್ಚುಮರೆಯಿಲ್ಲದೆ ಬಿಚ್ಚು ಮನಸ್ಸಿನಿಂದ ವ್ಯಕ್ತಪಡಿಸಿದ್ದಾರೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಬಾಯಿಂದ ಬಾಯಿಗೆ ಹರಿದು ಬಂದುದಾಗಿದೆ. ಅನೇಕ ಆಕರಗಳು, ವಿಚಾರಗಳನ್ನು ಪಡೆದುಕೊಂಡು, ವಿಕಾರಗಳು ಆಕಾರ ಪಡೆದುಕೊಂಡು ಸರಿಗಳು ತಪ್ಪುಗಳಾಗಿ, ತಪ್ಪುಗಳಾಗಿ ಸರಿಯಾಗಿ ಬಂದಿರಬಹುದು.

'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಜನಪದ ಸಾಹಿತ್ಯದ ಸೆಲೆಯೊಡೆದು ಜನಪದ ಸಾಹಿತ್ಯವೇ ಎರಾಣ ಸಾಹಿತ್ಯದ ತಾಯಿ ಬೇರು, ಜನಪದ ಸಾಹಿತ್ಯವೇ ಆದಿಯಾಗಿ ಪ್ರೌಢ ಸಾಹಿತ್ಯದ ಉದಯವಾಗಿರಬೇಕು ಜನತೆಯ ನಾಲಗೆಯ ಮೇಲೆ ನರ್ತಿಸಿದ ಸಾಹಿತ್ಯವಾಗಿದೆ. ಈಗ ಗ್ರಂಥಿಕ ರೂಪ ಪಡೆದು ಸಾಹಿತ್ಯ ರೂಪ ಪಡೆದಿರಬೇಕು.

ರೈತರು ಹೊಲವನ್ನು ಉಳುಮೆ ಮೂಡುವಾಗ, ಕಸ ತೆಗೆಯುವಾಗ, ಬಿತ್ತನೆ ಮಾಡುವಾಗ, ಕುಂಟಿ ಹೊಡೆಯುವಾಗ, ಬೀಸುವಾಗ, ಕುಟ್ಟುವಾಗ ಮನುಷ್ಯನ ಬದುಕಿನ ಪ್ರತಿಯಿಯೊಂದು ಕಾರ್ಯ ಕೆಲಸಗಳನ್ನು ಮೂಡುವಾಗ ಕೆಲಸಕ್ಕನುಗುಣವಾಗಿ ಹಾಡುವ ಕ್ರಿಯೆ ಆರಂಭವಾಗಿರಬೇಕು. ಇವುಗಳು ಕಾವ್ಯ, ಕಥನ ಸಾಹಿತ್ಯ, ಸಂಪ್ರದಾಯದ ಹಾಡು, ಭಜನೆ ಹಾಡು, ಭಕ್ತಿ ಹಾಡು, ಮದುವೆಹಾಡು, ಬಡತನ, ಸಿರಿತನ, ಪಡಿಪಾಟಲು, ಮುಂತಾದ ಪ್ರಸಂಗಗಳಲ್ಲಿ ಹಾಡುಗಳನ್ನು ಹಾಡಿದರು. ತಮಗಾದ ಆಯಾಸವನ್ನು ಪರಿಹರಿಸಿಕೊಳ್ಳುವ ಮಾರ್ಗವು ಆಗಿರಬಹುದು. ಸಾಹಿತ್ಯ ಕಟ್ಟುವ ಕ್ರಿಯೆಯೂ ಹೆದರಾಗಿಬಹುದು. ಅವರು ಛಂದಸ್ಸಿನ ಯಾವುದೇ ಗೊಂದಲು, ಗೋಜಲುಗಳಿಗೆ ಹೊಳಗಾಗದೆ ತಮಗೆ ಬಂದ ಗ್ರಾಮೀಣ ಭಾಷೆಯ ಸೊಗಡಿನಲ್ಲಿಯೇ ಸಾಹಿತ್ಯ ಹಾಡುವ ಕ್ರಿಯಾತ್ಮಕ ಚಟುವಟಿಕೆಗಳನ್ನು ಮೈಗೂಡಿಸಿ ಕೊಂಡಿರಬೇಕೆಂದು ನನ್ನ ತಿಳುವಳಿಕೆಯಾಗಿದೆ.

ಇಂದಿನ ಶಿಷ್ಟ ಸಾಹಿಯ ಧರ್ಮವನ್ನು ಚಾಚು ತಪಪದೆ ಪಾಲಿಸದ ಹಾಗೆ, ಜಾನಪದ ಸಾಹಿತ್ಯವೂ ಹೊರತಾಗಿಲ್ಲ ಎಂದೆನ್ನಬಹುದು ಜನಪದ ಹಾಡುಗಳನ್ನು ಎರಡು ರೀತಿಯಲ್ಲಿ ಗುರುತಿಸಬಹುದು. 1) Sared Song ಮತ್ತು Secular Song ಧಾರ್ಮಿಕ ಹಾಡುಗಳು, ಲೌಕಿಕ ಹಾಡುಗಳು ಎಂದು ಕರೆಯಬಹುದು. ಧಾರ್ಮಿಕ, ವಿಧಿ–ವಿಧಾನಗಳನ್ನು ಅಂದರೆ ದೇವರ ಹುಟ್ಟು, ಬೆಳವಣಿಗೆ, ಉತ್ಸಾಹಗಳು, ಪವಾಡಗಳು, ಶಕ್ತಿ–ಸಾಮರ್ಥ್ಯ ಮುಂತಾದವುಗಳನ್ನು ಕುರಿತು ವ್ಯಕ್ತಪಡಿಸಿದರೆ, ಲೌಕಿಕ ಹಾಡುಗಳು ಜಗತ್ತಿನಲ್ಲಿ ನಡೆಯುವ ಮನುಷ್ಯರ ಬಾಹ್ಯ ಮತ್ತು ಆಂತರಿಕ ಗುಣಾವಗುಣಗಳನ್ನು ಪಠಿಸುತ್ತಾ, ಸಮಸ್ಯೆಗಳಿಗೆ ಈಡಾಗುವ ವ್ಯವಸ್ಥೆಯನ್ನು ಕಟ್ಟಿಕೊಡುತ್ತದೆ. ಲೌಕಿಕ, ಹಾಡುಗಳಲ್ಲಿ ಸಾಮೂಹಿಕ (Choral) ಏಕ (Solo) ಎರಡು ಭಾಗ ಮೂಡಬಹುದು.

ಜನಪದ ಸಾಹಿತ್ಯ ಹೆಮ್ಮರವಾಗಿ ಬೆಳೆಯಲು ಎಲ್ಲರೂ ಶ್ರಮಿಸಬೇಕಾದ ಅನಿವಾರ್ಯತೆ ಇದೆ. 'ಕವಿರಾಜ ಮಾರ್ಗ' ಕೃತಿಯಲ್ಲಿ ಜನಪದ ಸಾಹಿತ್ಯವನ್ನು ಬಣ್ಣವಾಡು, ಹಾಡುಗಬ್ಬ, ಒನಕೆವಾಡು ಮುಂತಾದ ಹೆಸರುಗಳಿಂದ ಕರೆಯುತ್ತಿದ್ದಂತೆ ಕಾಣುತ್ತಿದೆ. ಆಯಾ ಪ್ರದೇಶಗಳಲ್ಲಿರುವ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಸಾರ ಮತ್ತು ಪ್ರಕಟ ಮಾಡುವ ಕೆಲಸ ಇಂದು ರಭಸವಾಗಿ ಸಾಗುತ್ತದೆ. ಇಂದು ಆಧುನಿಕ ನಾಗರೀಕತೆಯ ಸುಳಿಗಾಳಿಗೆ ಸಿಕ್ಕ ಜನಪದರ ಬದುಕು ತರಗತಿಯಂತೆ ಗಾಳಿಯಲ್ಲಿ ತೂರಾಡುವ ಸ್ಥಿತಿಯಲ್ಲಿರುವುದನ್ನು ಕಾಣಬಹುದು. ಜನಪದ ಸಾಹಿತ್ಯದ ಶಕ್ತಿ ಅಡಗಿರುವುದು ಅದರ ನಾದ, ಲಯ, ರಿಧಮ್‌ಗಳಲ್ಲಿ ಮಾತ್ರ ಅದಕ್ಕೆ ಬಳಸಿಕೊಂಡ ಮಟ್ಟ್ಯಾಗಳೂ ಸಹಿತ ಆಯಾ ಪ್ರದೇಶದ ರಾಗಗಳಲ್ಲಿ ಅದು ಪ್ರಸಾರ ಮತ್ತು ಪ್ರಚುರತೆಯನ್ನು ಪಡೆದುಕೊಂಡಿದೆ.

ಮನುಷ್ಯ ಹುಟ್ಟಿನಿಂದ ಆರಂಭವಾದ ಬದುಕು, ತನ್ನ ಅಂತಿಮ ಸ್ಥಿತಿಯವರೆಗೂ ಮನುಷ್ಯರು ಮಾಡುವ ಎಲ್ಲಾ ಕ್ರಿಯಾ ಚಟುವಟಿಕೆಗಳಾದ ಉಪನಯನ, ದೊಡ್ಡವರಾದಾಗ, ಮದುವೆ, ಬೀಸುವ, ಕುಟ್ಟುವ, ಕಣ ಹದಮಾಡುವ, ಹೊಲ ನೇಗಿಲು ಹೂಡುವ, ತೊಟ್ಟಿಲ ಕಾರ್ಯಕ್ರಮ, ಜೋಗುಳ ಹಾಡುವ, ಗಾಟಿ ಮಾಡುವ, ಗಾಚಿ ಹೊಡೆಯುವ, ಬೆಳೆ ಕೊಯ್ಯುವ, ರಾಶಿ ಮಾಡುವ, ಕಾಳುಗಳನ್ನು ಸಂಗ್ರಹಿಸುವ, ಕಳೆ ಕೀಳುವ, ಸೋಬಾನದ ಹಾಡುಗಳು, ಭಜನೆ ಹಾಡುಗಳು, ಕಥೆಗಳು, ಕಾವ್ಯಗಳು, ದೇವರ ಸ್ತುತಿಸೋ ಹಾಡುಗಳು, ಸಂಸಾರ, ಸಮಾಜ, ಅತ್ತೆ ಮನೆಯ ತೊಂದರೆಗಳು, ಸ್ತ್ರೀ ಶೋಷಣೆ, ಬಂಜೆತನದ ಬದುಕು, ಬಳಲಿ ಸಂಸ್ಕೃತಿ, ವಿಧವೆ, ವಿವಾಹ, ಅತ್ತೆ, ಸೊಸೆ, ನಾದಿನಿ, ಮಾವ, ಮೈದುನ, ತವರು ಮನೆ, ಗಂಡನ ಮನೆ, ನೆರಮನೆ, ಸತಿ–ಪತಿ, ಗಾದೆಗಳು, ಒಗಟುಗಳು, ಒಡಪುಗಳು, ಆಕಾರ, ಉಡುಗೆ–ತೊಡುಗೆ, ಆಚಾರ–ವಿಚಾರ, ತಾಯಿ–ತಂದೆ, ಪಶುಪಕ್ಷಿಗಳು, ಗೆಳೆತನ, ವಿರೋಧಿಗಳು, ಸಂಬಂಧಿಕರು, ಅಣ್ಣ–ತಮ್ಮ, ಕವಿವಾಣಿಯಾಗಿ ಶಿಷ್ಯ ಸಾಹಿತ್ಯ ಬಂದರೆ, ಜನವಾಣಿಯಾಗಿ, ಜನಪದ ಸಾಹಿತ್ಯ ಒಡಮೂಡಿತು. 1725 ಹೆನ್ರಿ ಬೊರ್ನ್ ಎಂಬುವರು ಬರೆದ 'Anitigcitiecs of the Common People' ಜನಪದ ಸಾಹಿತ್ಯದ ಮೊಟ್ಟ ಮೊದಲ ಕೃತಿಯಾಗಿದೆ. ಇಲ್ಲಿಂದಲೇ ಜನಪದ ಗೀತೆಗಳ ಮೇಲೆ ವಿಮರ್ಶೆ ಬಂದಂತಾಗಿದೆ. 1846 "Flokore" ಎಂಬ ಶಬ್ದವನ್ನು W.J. Thams ಎಂಬುವರು ಜನಪದ ಸಾಹಿತ್ಯಕ್ಕೆ ಅಧ್ಯಯನದ ಚೌಕಟ್ಟನ್ನು ಒದಗಿಸಿಕೊಟ್ಟನು ಈ ಹೆಸರನ್ನು ಕೊಟ್ಟವನು ಅವನೇ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಾಣುವ 'ವಸ್ತುಕ–ಎಂಬುದರ ಪಾತ್ಯ–ಗೇಯ, ಪಂಡಿತ, ಸಮ್ಮುಖ–ಜನ ಸಮ್ಮುಖ ಇವುಗಳಲ್ಲಿ ವರ್ಣಕ, ಗೇಯ, ಜನಸಮ್ಮುಖ ಜನಪದ ಸಾಹಿತ್ಯದ ಮುಖ್ಯಪರಿಕರವಾಗಿದೆ ಎಂದು ಹೇಳಬಹುದು. ವರ್ಣಕಕ್ಕಿಲ್ಲಂ ಲಕ್ಷಣಂ' ಎಂದು 'ವಸ್ತುಕ'ಕವಿಗಳು ತಿರಸ್ಕರಿಸಿದ ಸಾಹಿತ್ಯವಾಗಿದೆ. ಜನಪದ ಸಾಹಿತ್ಯ ಆದರೂ ಷಟ್ಪದಿ, ತ್ರಿಪದಿ, ಸಾಂಗತ್ಯ, ರಗಳೆ, ಸರಳ ರಗಳೆ, ಮಂದಾನಿಲರಗಳೆ, ಖಂಡ ಕಾವ್ಯ, ಕಥನ ಕಾವ್ಯಗಳ ಉಲ್ಲೇಖ ಜನಪದ ಸಾಹಿತ್ಯ ಪಡಿ ಅಚ್ಚಿನಂತಿದೆ. ಮೂಡಿರಬಹುದು ಸತ್ಯವಾದ ಸಂಗತಿಯಾಗಿದೆ. ಪ್ರಾಚೀನ ಕಾಲದ ಪಳಿಯುಳಿಕೆಗಳನ್ನು ಅರಗಿಸಿಕೊಂಡು, ಅದರ ಭಾವ, ಅನುಭಾವಗಳ ಆಧಾರದ ಮೇಲೆ ಇಂದಿನ ಜನಪದ ಸಾಹಿತ್ಯ ವಿಶ್ವ ವಿದ್ಯಾಲಯಗಳಲ್ಲಿ ಅಧ್ಯಯನಕ್ಕೆ ಒಳಗಾಗಿರುವುದು ದಿಟವಾಗಿದೆ. ಎಲ್ಲಾ ಜನಾಂಗದ ಸಾಂಸ್ಕೃತಿಕ ತವಕ–ತಲ್ಲಣ, ತುಡಿತ–ಮಿಡಿತ, ಕನವರಿಕೆ, ಬಯಕೆಗಳನ್ನು ಹಂಬಲ–ಹಾತೊರೆಯುವಿಕೆಯನ್ನು ಇಂದಿನ ಗ್ರಂಥಸ್ಥ ಭಾಷೆಯೊಂದಿಗೆ ದಾಖಲೆ ಮಾಡುವ ಸಾಹಸವನ್ನು ವಿಶ್ವವಿದ್ಯಾಲಯಗಳ ಮಾರ್ಗದರ್ಶಕರು, ಸಂಶೋಧಕರು, ಜಾನಪದ ವಿದ್ವಾಂಸರ ಶ್ರಮ ಸಾರ್ಥಖವಾಗಲಿ ಮುಂದಿನ ತಲೆಮಾರಿಗೆ.ಮುಂತಾದ ಕೆಲಸ ಕ್ರಿಯೆಗಳಲ್ಲಿ, ಸಂಬಂಧದ ಸಂಗತಿಗಳನ್ನು ಬೆಸೆಯುವಲ್ಲಿ ಅಥವಾ ಬಿಡುಗಡೆಗೊಳಿಸುವಲ್ಲಿ ಜನ ಪಂಚಾಯತಿಯಂಥ ಕ್ರಿಯೆಗಳು ಜನಪದರ ಬದುಕಿನ ವಿವಿಧ ಮಗ್ಗುಗಳನ್ನು ಪರಿಚಯಿಸುವ ಚಟುವಟಿಕೆಯಾಗಿ ಜನಪದ ಸಾಹಿತ್ಯ ಒಡಮೂಡಿದೆ. ಶರಣರ ವಚನಗಳು, ದಾಸರ ಕೀರ್ತನೆಗಳು, ತತ್ವ ಪದಕಾರರ ತತ್ವಪದಗಳು, ಜಾನಪದ ಹಾಡುಗಳು, ಗೀಗಿ ಹಾಡುಗಳು, ಕೋಲಾಟಗಳು,ನಾಟಕಗಳು, ರಂಗಭೂಮಿ, ಅಡುಗೆಯ ಸಂತಾಪ ಹಳ್ಳಿ ಜೀವನದ ಪ್ರತಿಯೊಂದು ಘಟ್ಟವನ್ನು ಕುರಿತು ಜನಪದ ಸಾಹಿತ್ಯ ತನ್ನ ಅಜಾನು ಬಾಹುಗಳನ್ನು ಚಾಚುತ್ತಿದೆ. ಇಂದು ಜನಪದ ಸಾಹಿತ್ಯವನ್ನು ಆಧುನಿಕ ತಂತ್ರಜ್ಞಾನದ ಮತ್ತು ಸಮೂಹ ಮಾಧ್ಯಮಗಳ ಭರಾಟೆಯಲ್ಲಿ ಉಳಿಸಿ ಬೆಳೆಸುವ ಕೆಲಸ ಓದುವ ಪರಂರೆಯವರ ಮತ್ತು ಮೌಖಿಕ ಪರಂಪರೆಯ ಜವಾಬುದಾರಿಕೆಯಾಗಿದೆ.

"ಬೆಳಗಾಗಿ ನಾನೆದ್ದು ಯಾರ್‍ಯಾರ್‍ಯ ನೆನೆಯಲಿ
ಎಳ್ಳು–ಜೀರಿಗೆ ಬೆಳೆಯೋಣಾ ! ಭೂಮಿತಾಯಿನ
ಎದ್ವೊಂದು ಗಳಿಗೆ ನೆನೆದೇನ !!

ಎನ್ನುವ ಹಾಡಿನ ತ್ರಿಪದಿಯನ್ನು ಗಮನಿಸುವುದಾದರೆ ಮುಂಜಾನೆ ಹಾಸಿಗೆಯಿಮದ ತನ್ನ ಲೌಕಿಕ ಬದುಕನ್ನು ಆರಂಭಿಸುವ ಮುನ್ನ, ಭೂಮಿ ತಾಯಿ ಎಲ್ಲರನ್ನು ಹೊತ್ತುಕೊಂಡು ಸಲಹುತ್ತಿರುವ ಅವಳಿಗೆ ನಮಸ್ಕರಿಸಿದರೆ ಬದುಕು ಹಸನಾದೀತು ಎನ್ನುವ ತಿಳುವಳಿಕೆ ಸ್ತ್ರೀಯರಿಗಿದೆ. ಬದುಕಿನ ಅನೇಕ ಸ್ತರ ವಿನ್ಯಾಸಗಳನ್ನು ದಾಟಿ ಸಮಾದಿ ಸ್ಥಿತಿಗೆ ಹೋಗುವ ಸಂದರ್ಭದ ಕ್ರಿಯಾ ವಿಧಿಗೆ ಬೇಕಾಗುವ ಪ್ರಮುಖ ಧ್ಯಾನಗಳಾದ ಎಳ್ಳು, ಜೀರಿಗೆ ಹುಟ್ಟು ಮತ್ತು ಸಾವಿನ ಸಂಕೇತಗಳನ್ನು ಗುರುತಿಸುವ ಅವಳ ಬೌದ್ಧಿಕತೆಯನ್ನು ಕುರಿತು ನಾವು ಅವಲೋಕಿಸಬೇಕಾಗಿದೆ.

'ದೇವರ ನೆನೆದರೆ ಸಾವ್ಹುಟ್ಟು ನಮಗಿಲ್ಲ !
ಹಾವು ಕಚ್ಚಿದರು ವಿಷವಿಲ್ಲ ! ಸರ್ಪದ
ಹೆಡೆಯ ದಾಟಿದರೂ ಭಯವಿಲ್ಲ !!

ಜನಪದ ಸಾಹಿತ್ಯದ ಬದುಕಿನ ಪ್ರಮುಖ ಘಟ್ಟವೆಂದರೆ ದೇವರ ಬಗೆಗೆ ಅವರಿಗಿರುವ ನಂಬಿಕೆ, ಹಬ್ಬ, ಉತ್ಸವ, ಜಾತ್ರೆ, ಮುಂತಾದ ಕ್ರಿಯೆಗಳು ಸಂಬಂಧಿಸಿವೆ. ತಮ್ಮ ಬದುಕಿನ ಊರುಗೋಲೇ ದೇವರಾಗಿದ್ದಾನೆ. ಎಂಬುವ ತಿಳುವಳಿಕೆಗಳು ಜನಪದರ ಬದುಕಿನ ನೆಲೆಗಳಾಗಿವೆ. ದೇವರ ಕರುಣೆಯೊಂದು ನಮ್ಮ ಮೇಲಿದ್ದರೆ ಕಲ್ಲಿನಂಥ ಕಷ್ಟಗಳು ಕರಗುತ್ತವೆ. ಹಾವು ತುಳಿದರೂ ಕಚ್ಚುವುದಿಲ್ಲ. ಕಚ್ಚಿದರೂ ವಿಷವೇರುವುದಿಲ್ಲ ಎಂಬ ನಂಬಿಕೆಗಳಿವೆ. ದೇವರೆಂದರೆ ಸಕಲ ಸಂಪತ್ತನ್ನು ನೀಡುವವನಾಗಿದ್ದಾನೆ. ವ್ರತ ಉಪವಾಸ, ಉಪಾಸನೆ, ಪೂಜೆ, ಕಾಯಕ ಹಂಚಿ ಉಣ್ಣುವ ಕ್ರಿಯೆ ಮುಂತಾದ ಕ್ರಿಯೆಗಳು ದೇವರನ್ನು ಸ್ತುತಿಸುವ ಸಂದರ್ಭಗಳಾಗಿವೆ.

ಅಕ್ಕವ ಸರಸೋತಿ ಟಾಗ್ಲಾಗ ಯಾಕ್ಕಿಂತಿ !
ಕೊಡುತೀನಿ ಬಾರ ನಿನಿಗಿಚಿಟ ! ನನ್ಮನದ
ಜಗುಲೀ ಮ್ಯಾಗ್ ಒರಗವ್ವ !!

ನಾನು ಹಾಡಬೇಕಾದರೆ, ನನ್ನ ನಾಲಿಗೆಯ ತೊಡಕಗಳನ್ನು ಸರಿಪಡಿಸುವ ಶಕ್ತಿ ಸರಸ್ವತಿ, ಶಾರದೆ, ವಿಘ್ನೇಶ್ವರ, ನೀವೆಲ್ಲ ಒಂದು ಹೊರಗಡೆ ಯಾಕೆ ನಿಂತಿರುವಿರಿ. ಬಳ್ಳಾರಿ ನಮ್ಮನೀಯ 'ಚಿಗಲಿ' ಎಂಬ ಜಾಗ ನಿಮಗಾಗಿಯೇ ಇದೆ ಎಂದು ದೇವರನ್ನು ಆಹ್ವಾನಿಸುವ ಕ್ರಿಯೆಯಲ್ಲಿ ತೊಡಗಿದ್ದಾಳೆ ಗೃಹಿಣಿ.

"ಆಗದವರ ಮನೆ ಮುಂದೆ
ಹೋಗಬ್ಯಾಡ ಕೊಳ್ಳಿಪಿಳ್ಳಿ
ಹೊಡದಾಳ ನಿನ್ನ ಖಡದಾಳ
ಬೈಗಿನ ಮುದ್ದೀಯ ಜೋಡಿಗೆ
ಜೋಡಾಗಿ ನಿನ್ನ ಜಡುದಾಳೆ.

ಮಹಿಳೆ ತನ್ನ ಮನೆಯಲ್ಲಿರುವ ಅಂದರೆ 'ಕೇರಿ ಸಂಸ್ಕೃತಿ' ನೆರಳಲ್ಲಿ ಬೆಳೆಯುವ ಕೋಳಿ ಮರಿಗೆ ತಿಳುವಳಿಕೆಯ ಮಾತುಗಳನ್ನು ಹೇಳುತ್ತಿದ್ದಾಳೆ. ನಿನಗೆ ಈ ಕೇರಿಯಲ್ಲಿ ವೈರಿಗಳ ಮನೆ ಇವೆ ನೀನು ಅದರ ಅಂಗಳದಲ್ಲಿರುವ ಕಸವನ್ನು ಕೆದರಲು ಹೋಗಬೇಡ. ನಿನ್ನನ್ನು ಅವಳು ಸಾಯುವ ಹಾಗೆ ಒಡಯುವುದಲ್ಲದೆ. ತಾವು ಸಮಯದಲ್ಲಿ ಮಾಡುವ ಮುದ್ದಿಯ ಜೊತೆಗೆ ನಿನ್ನ ಸಾಂಬರನ್ನಾಗಿ ಮಾಡಿಕೊಂಡು ನಿನ್ನ ನಾಶವನ್ನು ಮಾಡಿ ಬಿಡಬಹುದು ನಿನ್ನ ಸಾಹಿಸುವುದಷ್ಟೇ ಅಲ್ಲ ನಿನ್ನ ಸುಳಿವೇ ಸಿಗದ ಹಾಗೆ ಮಾಡಬಲ್ಲಳು. ನೀನು ಹುಷಾರಾಗಿರಬೇಕೆಂದು ಬೈಗೀನ ಮುದ್ದೀಯ ಜೋಡಿಗೆ ಜೋಡಾಗಿ ನಿನ್ನ ಜಡುದಾಳು " ಕತ್ತಲಲ್ಲಿ ಕಾಣದ ಹಾಗೆ ಮತ್ತೆ ನಿನ್ನ ಪಳೆಯುಳಿಕೆಗಳು ಸಿಗದೆ ಹಾಗೆ ತನ್ನ ದೇಹದಲ್ಲಿ ಅಡಗಿಸಿ ಕೊಳ್ಳುವ ಶಕ್ತಿ ಅವರಿಗಿದೆ ಎಂದು ಅಭಿವ್ಯಕ್ತಿಸಿರುವ ಕ್ರಿಯೆ ಮನ ಮೊಹಕವಾದುದು. ಇಂದಿನ ಜಗತ್ತಿನಲ್ಲಿ ವೈರಿಗಳನ್ನು ಸದೆ ಬಡಿಯುವ ತಂತ್ರಗಳೂ ಸಹಿತ ಕೋಳಿ ಮರಿಗಳ ನಾಶದಂತೆ ಆಗಬಹುದು ಎಂಬ ಮಾರ್ಮಿಕ ಸತ್ಯವನ್ನು ಸಮಾಜಕ್ಕೆ ತಿಳಿಯು ಹೇಳಿದಾಳೆ ಆ ಸ್ತ್ರೀ.

ನೆರಮನೆ ಸಿರಿದೇವಿ ನೀನಾನು ನನಮಗಳೇ !
ಮನಿಯಾಗೆ ಭೇದ ಬಗಿಬ್ಯಾಡ ! ಕಂದವ್ವ
ತುಂಬಿದ ಮನಿಯನ್ನು ಒಡಿಬ್ಯಾಡ !!
ಬಾಳುವೆ ಮಾಡಿದರೆ ಬಾ ತಂಗಿ ಅಂದಾರು !
ಬಾಳುವೆಗಟ್ಟು ಮಾತಿಗಟ್ಟು ! ಬಾಳಿದರೆ.
ಹೆತ್ತವರ ಕುಲಕೆ ಹಗೆಯಾದೆ !!
ಹುಟ್ಟಿದ ಮನೆಯಿಂದ ಮಟ್ಟಿಲಿನಿಳಿವಾಗ !
ಹೊಟ್ಟೆಗೆ ಸಿಡಿಲು ಬಡಿದಾಂಗ ! ಹೆತ್ತವ್ವೆ
ಕಣ್ಣ ನೀರೆದ್ದು ಹೊಳೆಯಾದೂ !

ಮದುವೆ ಮಾಡಿ ಮಗಳನ್ನು ಗಂಡನ ಮನೆಗೆ ಕಳಿಸುವಾಗ ತಾಯಿಯು ವೇದನೆಯನ್ನೂ ಈ ಮೇಲಿನ ಪಟ್ಟದ ವಿವರಣೆಯನ್ನು ಬಯಸುತ್ತದೆ. ಚಿಕ್ಕವಳಿದ್ದಾಗಿದ ಸಾಕಿ–ಸಲವಿ ದೊಡ್ಡವಳಾದ ಮೇಲೆ ಬೇರೊಬ್ಬರ ಮನೆಗೆ ಕಳಿಸುವಾಗ ತಾಯಿಯ ಕಣ್ಣೀರು ಹೊಳೆಯಾಗಿಹರಿಯುವದಲ್ಲದೆ. ತನ್ನ ಹೊಟ್ಟೆಯಿಂದ ಹುಟ್ಟಿ ಬಂದು ಈಗ ಸಿಡಿಲಿನಂತಾಗಿದ್ದಾಳೆ ಗಂಡನ ಮನೆಗೆ ಹೋಗುವಾಗ ಇದು ಸಹಜ ಪ್ರಕ್ರಿಯೆ ಹೆಣ್ಣು ಹೆತ್ತವರ ಸಂಕಟ ಅವರೇ ಗೊತ್ತು ಹೊಳೆಯಲ್ಲಿ ಎಲ್ಲವೂ ತೇಲಿ ಹೋಯಿತೆನಿಸುತ್ತದೆ.

ಹಡೆದ ತಾಯಿಗೆ
ಹಡೆದವ್ವ ಇರುತಾನ ಹಡಿಬೇಕು ಮಕ್ಕಳನ !
ಮುಡಿಬೇಕು ಹಂಪಿ ದವನ್ನವ ! ಗಾಜಿನ ಬಳಿಯ
ರಾಯರ ಇರತನ ಇಡಬೇಡ !!

ಈ ಮೇಲಿನ ಪದ್ಯ ತವರ ಮನೆಯಲ್ಲಿ ಹೆರಿಗೆ ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ಗಂಡನ ಮನೆಗೆ ಹೋಗುವ ಸನ್ನಿವೇಶ. ತವರು ಮನೆಯಲ್ಲಿ ತಾಯಿ ಮಗಳನ್ನು ಅಕ್ಕರೆಯಿಂದ ಪ್ರೀತಿಯಿಂದ ವಾತ್ಸಲ್ಯದಿಂದ ಹಾರೈಕೆ ಮಾಡಿ ಕಳುಹಿಸುವ ಸಂದರ್ಭವನ್ನು ಈ ಗೃಹಿಣಿ ನೆನೆಯುತ್ತಾಳೆ. ತಮ್ಮ ಪ್ರೇಮದ ಸಂಕೇತವಾದ ಮಗುವನ್ನು ಅತ್ತೆಯ ಮನೆಯವರಿಗೆ ತೋರಿಸುವುದೇ ಒಂದು ಸೊಬಗು ಸೌಂದರ್ಯ.

ಅಣ್ಣನ ಹೆಂಡತಿ ಕಣ್ಣಿಗೆ ಒಳ್ಳೆವಳು.
ಸುಣ್ಣದ ನೀರು ಒಲಿಮುಂದ ! ಇಟಕೊಂಡು
ಎಮ್ಮೆ ಹಾಲೆಂದು ಬಡಿದ್ಯಾಳು !

ಅತ್ತಿಗೆ ಸುಣ್ಣದ ನೀರನ್ನು ಎಮ್ಮೆ ಹಾಲೆಂದು ನೀಡುವ ಹಾಡು ಯಾಕೆ ಬಂತೋ ಗೊತ್ತಿಲ್ಲ ಮನೆಯ ವಂಶ ಬೆಳಗಲು ಬಂದವಳು ಹೀಗ್ಯಾಕೆ ಮಾಡಿದಳು ತಿಳಿಯದು.

ಹಡೆದಮ್ಮ ಇದ್ದಾಗ ನಡುಮನಿ ನನಗಿತ್ತು !
ಕಡಗದ ಕೈಯ್ಯ ಸೊಸಿ ಬಂದು ! ನಡೆದಾಗ
ತುದಿಗಟ್ಟಿ ನನಗೆ ಎರವಾಯ್ತು !!

ಅವ್ವ ಇದ್ದಾಗ ತವರು ಮನೆಯಲ್ಲಿ ಮನೆಯಲ್ಲಿ ನಾನೇ ಓಡಾಡುತ್ತಿದೆ. ಈಗ ಸೊಸೆ ಬಂದು ಮೇಲೆ ನನ್ನ ಬಳಗ ಕರೆಯುವ ತಾಯಿಯ ಇಲ್ಲ, ಅಣ್ಣಾ ಅತ್ತಿಗೆ ಮಾತನ್ನು ಕೇಳಿ ನನ್ನನ್ನು ತಿರಸ್ಕಾರದ ದೃಷ್ಟಿಯಿಂದ ನೋಡಿದ ಎಂದಿದ್ದಾಳೆ.

ಗಂಡ ಹೆಂಡಿರ ಜಗಳ ಗಂಧ ತೀಡಿದಾಂಗ
ನಂಗಿತ ನೀರು ಎರೆಧಾಂಗ ! ಹಿರಿ ಹೊಳೆಯ
ಗಂಗವ್ವಸಾಗಿ ಹರಿದಾಂಗೆ

ಸತಿ ಪತಿಗಳ ಜಗಳ ಆಡಿದಷ್ಟು ಗಂಧದ ವಾಸನೆ ಬರುವ ಹಾಗೆ ಅದು ಆ ಗಂಧ ತೀಡಿದಂತೆ ಒಬ್ಬರನೊಬ್ಬರು ಅರಿತುಕೊಂಡು ಬಾಳ ನಂಟನ್ನು ಬೆಸೆದುಕೊಳ್ಳಬೇಕು.

ಸಮಾಜದಲ್ಲಿದ್ದ ಜನರೆಲ್ಲರೂ ಸೇರಿ ರಚಿಸಿದ ಜನಪದರ ಸಾಹಿತ್ಯ ಇಂದು ನಶಿಸಿ ಹೋಗುವ ಸಂದರ್ಭ ನಮ್ಮ ಮುಂದಿದೆ. ಜನಪದ ಸಾಹಿತ್ಯಕ್ಕೂ ಇಂದು ಶಾಸ್ತ್ರೀಯ ಸ್ಥಾನ ಕೊಡಬೇಕೆಂದು ಸಂಶೋಧಕರ ಮತ್ತು ವಿದ್ವಾಂಸರ ವಾದಗಳಿವೆ.